**OS 128/2022 (PW-1)**

<u>ದಿಃ 16-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಮುಂದುವರೆದು ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. **KGP** ವಕೀಲರಿಂದ:</u>

1 ನೇ ಪ್ರತಿವಾದಿಯ ಹೆಸರು ಗಾಡಪ್ಪ ಇರುತ್ತದೆ. ಭೀಮಣ್ಣ ತಂದೆ ಗಾಲಪ್ಪ ನನಗೆ ಪರಿಚಯ ಇಲ್ಲ. ಮುಖ್ಯ ವಿಚಾರಣೆಯಲ್ಲಿ ಬರೆದ ಸಂಗತಿ ನನಗೆ ಗೊತ್ತಿರುತ್ತದೆ. ಯವನಪ್ಪ ಮಲ್ಲಪ್ಪ ಬೇಳಪಬ್ಬ ಎಂಬುವವರಿಗೆ ಜಮೀನು ಮಾರಾಟ ಮಾಡಿರುತ್ತಾರೆ ಅಂದರೆ ಸರಿಯಲ್ಲ. ನನಗೆ ಈಗ 57 ವರ್ಷ ವಯಸ್ಸು ಇರುತ್ತದೆ. ದಾವಾ ಆಸ್ತಿಗೆ ನಾನು ರೀತಿ ಸಂಬಧ ಇಲ್ಲ ಅಂದರೆ ಸರಿಯಲ್ಲ. 1961 ರಿಂದ ಪ್ರತಿವಾದಿಯರು ದಾವಾ ಆಸ್ತಿಯ ಕಬ್ಜ ವಹಿವಾಟದಲ್ಲಿ ಇರುತ್ತಾರೆ ಅಂದರೆ ಸರಿಯಲ್ಲ. ಕಂಪ್ಯೂಟರ್ ಬರುವ ಮೊದಲು ಪಹಣಿಯನ್ನು ಗ್ರಾಮ ಲೆಕ್ಕಾಧಿಕಾರಿ ನೀಡುತ್ತಿದ್ದರು. ಹಕ್ಕು ಬದಲಾವಣೆ ಸಹ ಗ್ರಾಮಲೆಕ್ಕಾಧಿಕಾರಿ ಮಾಡುತ್ತಿದ್ದರು

ಅಂದರೆ ಸರಿ. ನನಗೆ 22 ವರ್ಷದಿಂದ ತಿಳುವಳಿಕೆ ಬಂದಿರುತ್ತದೆ. ನಾನು 12 ನೇ ವಯಸ್ಸಿನಲ್ಲಿ ಮಹಾರಾಷ್ಟ್ರಕ್ಕೆ ಹೋಗಿರುತ್ತೇವೆ. 22 ನೇ ವಯಸ್ಸಿಗೆ ಮರಳಿ ಬಂದಿರುತ್ತೇನೆ. ನಾನು ಅವತ್ತಿನಿಂದ ದಾವಾ ಅಸ್ತಿಯ ಪಹಣಿ ಪತ್ರಿಕೆಯನ್ನು ತೆಗೆಯುತ್ತಾ ಬಂದಿರುತ್ತೇನೆ ಅಂದರೆ ಸರಿ. ಅವುಗಳನ್ನು ಪರಿಶೀಲನೆ ಮಾಡುತ್ತಾ ಬಂದಿರುತ್ತೇನೆ ಅಂದರೆ ಸರಿ. ದಾವಾ ಆಸ್ತಿಯ ಚಕ್ಕ ಬಂದಿ ಪೂರ್ವಕ್ಕೆ ಅಲ್ಲಾದೀನ್ ಗಾಲಿಪ್, ಪಶ್ಚಿಮಕ್ಕೆ ಚಂದಪ್ಪ ಯಾಳಗಿ ಪೂಜಾರಿ, ಉತ್ತರಕ್ಕೆ ಸಾಗನೂರಿನಿಂದ ಉರ್ಮಾಗಾಕ್ಕೆ ಹೋಗುವ ರಸ್ತೆ ಮತ್ತು ದಕ್ಷಿಣಕ್ಕೆ ಒಂದು ಹಳ್ಳ ಇರುತ್ತದೆ. ದಾವಾ ಆಸ್ತಿಯು ನನ್ನ ಅಜ್ಜನ ಹೆಸರಿನಲ್ಲಿ ಇರುತ್ತದೆ ಎಂದು ಸುಳ್ಳ ಹೇಳುತ್ತಿದ್ದೇನೆ ಅಂದರೆ ಸರಿ ಅಲ್ಲ. ನನ್ನ ಅಜ್ಜನಿಂದ ನನ್ನ ತಂದೆಯವರ ಹೆಸರಿಗೆ ಬಂದು ಅವರ ಮಾರಾಟ ಮಾಡಿರುತ್ತಾರೆ ಅಂದರೆ ಸರಿಯಲ್ಲ. ಪ್ರತಿವಾದಿಯು ಖರೀದಿ ಪಡೆದ ದಿನದಿಂದ ಕಬ್ಜ ವಹಿವಾಟದಲ್ಲಿ ಇರುತ್ತಾರೆ ಅಂದರೆ ಸರಿಯಲ್ಲ. ನನ್ನ ತಂದೆ ತೀರಿಕೊಂಡು 18 ವರ್ಷ ಆಗಿರುತ್ತದೆ. ಖರೀದಿ ಪತ್ರ ವಿರೋಧಿಸಿ ನಾನು ತಹಶೀಲ್ದಾರವರ ಮುಂದೆ ಅರ್ಜಿ ಸಲ್ಲಿಸಿರುತ್ತೇನೆ ಸದರಿ ಅರ್ಜಿಯ ಪ್ರತಿಯನ್ನು ನ್ಯಾಯಾಲಯದ ಮುಂದೆ ಸಲ್ಲಿಸಿರುತ್ತೇನೆ. ಖರೀದಿ ಪತ್ರ ವಿರೋಧಿಸಿ ನಾನು ತಹಶೀಲ್ದಾರವರ ಮುಂದೆ ಅರ್ಜಿ ಸಲ್ಲಿಸಿರುತ್ತೇನೆಂದು ಸುಳ್ಳ ಹೇಳುತ್ತೀದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಗೆ ನನಗೆ ಯಾವುದೇ ಸಂಬಂಧ ಇಲ್ಲ ಎಂದು ಸೂಚಿಸುವುದು ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಈಗೀ ಉಳುಮೆ ಮಾಡುತ್ತಿದ್ದಾರೆ ಅಂದರೆ

ಸರಿ. ಸಾಕ್ಷಿಯು ಮುಂದುವರೆದು ಆದ್ದರಿಂದ ನಾನು ಈ ದಾವೆಯನ್ನು ಹೂಡಿರುತ್ತೇನೆ ಎಂದು ನುಡಿಯುತ್ತಾರೆ.

ಪ್ರತಿವಾದಿಯರು ಸುಮಾರು 60 ವರ್ಷಗಳಿಂದ ದಾವಾ ಆಸ್ತಿಯಲ್ಲಿ ಉಳುಮೆ ಮಾಡುತ್ತಿದ್ದಾರೆ. ನನಗೆ ಈ ಸುವ್ರೂರು 28 ವರ್ಷಗಳಿಂದ ಪ್ರತಿವಾದಿಯರು ಉಳುಮೆ ಮಾಡುತ್ತಿರುವ ಬಗ್ಗೆ ಗೊತ್ತಾಗಿರುತ್ತದೆ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ